## ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಜಿಎಂ/1454/2021 ಬಹುಮಹಡಿಗಳ ಕಟ್ಟಡ,
ಮಂಡನಾಧಿಕಾರಿಗಳ ಶಾಖೆ, ಪಿ.ಒ. ಎ.ಆರ್.ಇ.17 ಡಾ: ಅಂಬೇಡ್ಕರ್ ವೀದಿ,ಬೆಂಗಳೂರು,
ದಿನಾಂಕ: 24/02/2022

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ (1) ಶ್ರೀ ರಮೇಶ ತಂದೆ ಸಿದ್ದಲಿಂಗಪ್ಪ ಹಾರ್ನಳ್ಳಿ, ಫಾರೆಸ್ಟ್ ಗಾರ್ಡ್, ಅರಣ್ಯ ಇಲಾಖೆ, ಹಿರೆಕೆರೂರು ಕಚೇರಿ, ಹಾವೇರಿ ಜಿಲ್ಲೆ (2) ಶ್ರೀ ಗಜೇಂದ್ರ ಕೆ.ಎನ್ ತಂದೆ ನಾರಾಯಣ, ಉಪ ವಲಯ ಅರಣ್ಯ ಅಧಿಕಾರಿ, ಸಂಚಾರಿ ದಳ, ಹಿರೆಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೊಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಪೂರ್ವ ವಲಯ, ದಾವಣಗೆರೆ ಇವರು ಹಾವೇರಿ ಜಿಲ್ಲೆಯ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ.) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ವರದಿಯಲ್ಲಿ (1) ಶ್ರೀ ರಮೇಶ ತಂದೆ ಸಿದ್ದಲಿಂಗಪ್ಪ ಹಾರ್ನಳ್ಳಿ, ಫಾರೆಸ್ಟ್ ಗಾರ್ಡ್, ಅರಣ್ಯ ಇಲಾಖೆ, ಹಿರೆಕೆರೂರು ಕಚೇರಿ, ಹಾವೇರಿ ಜಿಲ್ಲೆ (2) ಶ್ರೀ ಗಜೇಂದ್ರ ಕೆ.ಎನ್ ತಂದೆ ನಾರಾಯಣ, ಉಪ ವಲಯ ಅರಣ್ಯ ಅಧಿಕಾರಿ, ಸಂಚಾರಿ ದಳ, ಹಿರೆಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ (ಇನ್ನು ಮುಂದೆ '1 ಮತ್ತು 2 ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ ಶ್ರೀ ಮಹಮ್ಮದ ರಫೀಕ್ ತಂದೆ ಸೈಯದ್ ಪೀರ್‌ಸಾಬ್ ಹಿರೇಕೆರೂರು, ಸಾ: ಚಿಕೇರೂರು, ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 (2) ರನ್ವಯ ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2) **<u>ದೂರಿನ ಸಂಕ್ಷಿಪ್ತ ವಿವರಣೆ</u>:-** ದೂರುದಾರರು ಕಟ್ಟಿಗೆ ವ್ಯಾಪಾರ ಮಾಡುತ್ತಿದ್ದು ದಿನಾಂಕ 19/10/2016 ರಂದು ವ್ಯಾಪಾರ ಮಾಡಿದ್ದ ಕಟ್ಟಿಗೆಯನ್ನು ಅಧಿಕೃತವಾಗಿ ಸಾಗಾಟ ಮಾಡುವ ಸಲುವಾಗಿ ಪಾಸಿನ ಬಗ್ಗೆ 1 ನೇ ಎದುರುದಾರರನ್ನು ವಿಚಾರಿಸಿದಾಗ 26,000/- ರೂಪಾಯಿಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದರಿಂದ ಸದರಿ ಲಂಚದ ಹಣ ನೀಡಲು ಇಷ್ಟವಿಲ್ಲದ ಕಾರಣ ದೂರುದಾರರು ಹಾವೇರಿ ಜಿಲ್ಲೆ ಎ.ಸಿ.ಬಿ. ಪೊಲೀಸ್ ಠಾಣೆಗೆ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯೊಂದಿಗೆ ದೂರನ್ನು ದಿನಾಂಕ 26/10/2016 ರಂದು ನೀಡಿರುತ್ತಾರೆ. ಈ ಬಗ್ಗೆ ಹಾವೇರಿ ಜಿಲ್ಲೆ ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ. 02/2016 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ದಿನಾಂಕ 26/10/2016 ರಂದು ನೆರಳು ಸಾಕ್ಷಿ ಹಾಗೂ ಸಹ ಪಂಚರನ್ನು ಬರ ಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ಅವರಿಂದ ದೂರಿನ ವಿಷಯವನ್ನು ತಿಳಿದ ನಂತರ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯನ್ನು ಅದನ್ನು ಸಿ.ಡಿ.ಗೆ ವರ್ಗಾಯಿಸಿಕೊಂಡು ದೂರನ್ನು ಸಲ್ಲಿಸಿದ್ದು, ಸದರಿ ಸಿ.ಡಿ.ಯನ್ನು ಪಂಚರಿಗೆ ಕೇಳಿಸಿ, ಲಪೀಕರಣ ಮಾಡಿ ವಶಪಡಿಸಿಕೊಂಡಿರುತ್ತಾರೆ. ನಂತರ ಲಂಚದ ಹಣ ರೂ. 20,000/-ಗಳನ್ನು ದೂರುದಾರರು ಹಾಜರುಪಡಿಸಿದ್ದು, ಅವುಗಳ ಮುಖಬೆಲೆ ಮತ್ತು ನೋಟಿನ ಸಂಖ್ಯೆ ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ ಪಂಚರ ಮತ್ತು ತನಿಖಾಧಿಕಾರಿಗಳ ಸಹಿ ಪಡೆದಿರುತ್ತಾರೆ. ಸದರಿ ಹಣಕ್ಕೆ ಪಿನಾಪ್ತಲಿನ್ ಪೌಡರ್ ಲೇಪಿಸಿ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ, ಸದರಿ ದ್ರಾವಣಗಳಲ್ಲಿ ನೋಟುಗಳಿಗೆ ಪಿನಾಪ್ತಲಿನ್ ಪೌಡರ್ ಲೇಪಿಸಿದ ಪಂಚನ ಕೈ ಬೆರಳುಗಳನ್ನು ದ್ರಾವಣಗಳಲ್ಲಿ ಅದ್ದಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಈ ಬಗ್ಗೆ ಮಾದರಿ ದ್ರಾವಣ ಹಾಗೂ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣಗಳನ್ನು ಪ್ರತ್ಯೇಕವಾಗಿ ವಶಪಡಿಸಿಕೊಂಡು ಹಂತ ಹಂತವಾಗಿ ಫೋಟೋಗಳನ್ನು ತೆಗೆಸಿ, ಪ್ರಕರಣದ ಮಾಹಿತಿ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ತನಿಖಾಧಿಕಾರಿಯವರು ಸೂಚಿಸಿರುತ್ತಾರೆ. ಶ್ರೀ ದೇವರಾಜ್ ತಂದೆ ರಮೇಶ್ ಕಾಂಬಳಿ, ದ್ವಿ.ದ.ಸ., ಕಂದಾಯ ಇಲಾಖೆ, ಹಾವೇರಿ ಇವರನ್ನು ನೆರಳು ಸಾಕ್ಷಿಯಾಗಿ ನೇಮಿಸಿ, ದೂರುದಾರರೊಂದಿಗೆ ಎದುರುದಾರರ ಬಳಿ ಹೋಗಿ ಅವರಿಗೆ ಅನುಮಾನ ಬಾರದಂತೆ ಮತ್ತು ಎದುರುದಾರರು ಹಾಗೂ ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು ಘಟನೆಯನ್ನು

ವೀಕ್ಷಿಸಿ, ಎದುರುದಾರರು ಹಣವನ್ನು ಕೇಳಿ ಪಡೆದುಕೊಂಡರೆ, ಹಣವನ್ನು ಹೇಗೆ ಪಡೆದುಕೊಳ್ಳುತ್ತಾರೆ, ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ ನಂತರ ತಿಳಿಸಬೇಕೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ದೂರುದಾರರಿಗೆ ಮೊಬೈಲ್‌ನಲ್ಲಿ ಸಂಭಾಷಣೆಯನ್ನು ರೆಕಾರ್ಡ್ ಮಾಡುವಂತೆ ಸೂಚಿಸಿದ್ದು ಇರುತ್ತದೆ. ದೂರುದಾರರಿಗೆ ಎದುರುದಾರರು ಲಂಚದ ಹಣ ಬೇಡಿಕೆ ಇಟ್ಟು ಸ್ವೀಕರಿಸಿದ ನಂತರ ತನ್ನ ಕರ್ಚೀಫ್‌ನಲ್ಲಿ ಮುಖ ಒರೆಸಿಕೊಳ್ಳುವುದರ ಮೂಲಕ ಸಂಜ್ಞೆ ನೀಡಬೇಕೆಂದು ಸೂಚಿಸಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪ್ರಾಯೋಗಿಕ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

4) ದಿನಾಂಕ 26/10/2016 ರಂದು ಹಿರೇಕೆರೂರ ಪಟ್ಟಣದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಯಲ್ಲಿ ದೂರುದಾರರ ಜೊತೆ ನೆರಳು ಸಾಕ್ಷಿ ಶ್ರೀ ದೇವರಾಜ್ ತಂದೆ ರಮೇಶ್ ಕಾಂಬಳಿ ಇವರ ಸಮಕ್ಷಮ 1 ನೇ ಎದುರುದಾರರು ದೂರುದಾರರಿಗೆ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಪಿನಾಪ್ತಲಿನ್ ಪೌಡರ್ ಲೇಪಿತ ರೂ. 20,000/- ಲಂಚದ ಹಣವನ್ನು ಬಲಗೈಯಿಂದ ಪಡೆದು ಎರಡೂ ಕೈಗಳಿಂದ ಎಣಿಸಿಕೊಂಡು ತಮ್ಮ ಶರ್ಟಿನ ಎಡ ಜೇಬಿಗೆ ಇಟ್ಟುಕೊಂಡಿರುತ್ತಾರೆ. ನಂತರ 1 ನೇ ಎದುರುದಾರರು ಮತ್ತೆ ಪಾಸ್ ಹಾಕಲಿಕ್ಕೆ ರೂ. 5,000/- ಹಣ ಕೇಳಿರುತ್ತಾರೆ. ಆಗ ದೂರುದಾರರು "ತನ್ನ ಹತ್ತಿರ ಇಲ್ಲ" ಎಂದು ಹೇಳಿದಾಗ "2,000/- ರೂ. ಕೊಡಬಲ್ಲೆ, ಅದನ್ನು ಹೊರಗಡೆಯಿಂದ ಇಸಿದುಕೊಂಡು ಬರಬೇಕು" ಅಂತ ಹೇಳಿ ಕಛೇರಿಯಿಂದ ಹೊರಗೆ ಬಂದು ಕರ್ಚೀಫ್‌ನಿಂದ ಮುಖ ಒರೆಸಿಕೊಳ್ಳುವುದರ ಮೂಲಕ ನಿಗದಿತ ಸಂಜ್ಞೆಯನ್ನು ನೀಡಿರುತ್ತಾರೆ. ತನಿಖಾಧಿಕಾರಿಗಳು ಸಹ ಪಂಚ ಹಾಗೂ ಸಿಬ್ಬಂದಿಯವರೊಂದಿಗೆ ಸದರಿ ಕಛೇರಿಯ ಒಳಗೆ ಬಂದು 1 ನೇ ಎದುರುದಾರರಿಗೆ ತಮ್ಮ ಪರಿಚಯ ನೀಡಿ ಅವರ ಹೆಸರು ವಿಳಾಸಗಳನ್ನು ಕೇಳಿ, ಅಲ್ಲಿ ನಡೆದಂತಹ ವಿದ್ಯಮಾನಗಳನ್ನು ದೂರುದಾರರಿಂದ ಮತ್ತು ನೆರಳು ಸಾಕ್ಷಿರವರಿಂದ ಮಾಹಿತಿ ಪಡೆದು 1 ನೇ ಎದುರುದಾರರಿಂದ ಲಂಚದ ಹಣವನ್ನು ನೀಡಲು ಕೇಳಿದಾಗ 1 ನೇ ಎದುರುದಾರರು ತಮ್ಮ ಶರ್ಟಿನ ಎಡ ಜೇಬಿನಿಂದ ಹಣವನ್ನು ಟೇಬಲ್ ಮೇಲೆ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಗಳು ಸದರಿ ಪಿನಾಪ್ತಲಿನ್ ಲೇಪಿತ ರೂ. 20,000/- ನೋಟುಗಳನ್ನು ಪರಿಶೀಲಿಸಲಾಗಿ ಅವುಗಳ ಸಂಖ್ಯೆ ಮತ್ತು ಮೌಲ್ಯ ವಹಿಸಿಕೊಡುವ ಪಂಚನಾಮೆ ಕಾಲದಲ್ಲಿ ನಮೂದಿಸಿದ ನೋಟುಗಳ ಸಂಖ್ಯೆ

ಮತ್ತು ಮೌಲ್ಯಕ್ಕೆ ತಾಳೆಯಾಗಿದ್ದು ಇರುತ್ತದೆ. 1 ನೇ ಎದುರುದಾರರು ತಮ್ಮ ಎರಡೂ ಕೈಗಳಿಂದ ಪಿನಾಪ್ತಲಿನ್ ಪೌಡರ್ ಲೇಪಿತ ರೂ. 20,000/- ಲಂಚದ ಹಣವನ್ನು ತೆಗೆದುಕೊಂಡು ಎರಡೂ ಕೈಗಳಿಂದ ಎಣಿಸಿ ಶರ್ಟಿನ ಎಡ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ ಎಂದು ದೂರುದಾರರು ಮತ್ತು ನೆರಳು ಸಾಕ್ಷಿ ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ಪಂಚರ ಸಮಕ್ಷಮ ಸದರಿ ಲಂಚದ ಹಣವಾದ 20,000/- ರೂ.ಗಳನ್ನು ಎದುರುದಾರರಿಂದ ಅಮಾನತ್ತು ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು 1 ನೇ ಎದುರುದಾರರ ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಅದೇ ರೀತಿ 1 ನೇ ಎದುರುದಾರರ ಎಡಗೈ ಬೆರಳುಗಳನ್ನು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ತನಿಖಾಧಿಕಾರಿಗಳು 1 ನೇ ಎದುರುದಾರರಿಗೆ ಬದಲಿ ಶರ್ಟಿನ ವ್ಯವಸ್ಥೆಯನ್ನು ಮಾಡಿ ಶರ್ಟನ್ನು ಬಿಚ್ಚಿಸಿಕೊಂಡು ಶರ್ಟಿನ ಎಡಭಾಗದ ಜೇಬನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ಸದರಿ ದ್ರಾವಣಗಳನ್ನು ಹಾಗೂ ಶರ್ಟನ್ನು ಪಂಚರ ಸಮಕ್ಷಮ ಅಮಾನತ್ ಪಡಿಸಿಕೊಂಡಿರುತ್ತಾರೆ. ಜಪ್ತಿ ಪಂಚನಾಮೆ ಕಾಲದಲ್ಲಿ ದೂರುದಾರ ಮತ್ತು ಎದುರುದಾರರ ಮಧ್ಯ ನಡೆದ ಮೊಬೈಲ್‌ನಲ್ಲಿ ಮುದ್ರಣಗೊಂಡಂತಹ ಸಂಭಾಷಣೆಯನ್ನು ಕಂಪ್ಯೂಟರಿಗೆ ಅಳವಡಿಸಿ, ಎರಡು ಡಿ.ವಿ.ಡಿ. ಗಳನ್ನು ತಯಾರಿಸಿ ವಶಪಡಿಸಿಕೊಂಡಿರುತ್ತಾರೆ. ಸದರಿ ಸಂಭಾಷಣೆಯನ್ನು ಲಿಪೀಕರಣ ಮಾಡಿ ವಶಪಡಿಸಿಕೊಂಡಿರುತ್ತಾರೆ. ಎದುರುದಾರರ ಮತ್ತು ದೂರುದಾರರ ಮಧ್ಯ ಜಪ್ತಿ ಪಂಚನಾಮೆ ಪೂರ್ವ ಹಾಗೂ ಜಪ್ತಿ ಪಂಚನಾಮೆ ಕಾಲದಲ್ಲಿ ನಡೆದ ಸಂಭಾಷಣೆಗಳನ್ನು ಎದುರುದಾರರ ಮೇಲಾಧಿಕಾರಿಯಾದ ಶ್ರೀ ಬಸವರಾಜ ಅರಿಷಣದ ಆರ್. ಎಫ್. ಓ. ಹಿರೇಕೆರೂರು ಇವರಿಗೆ ಕೇಳಿಸಲಾಗಿ ಸದರಿ ಸಂಭಾಷಣೆಗಳಲ್ಲಿ ಇಬ್ಬರೂ ಎದುರುದಾರರ ಧ್ವನಿಗಳನ್ನು ಗುರುತಿಸಿರುತ್ತಾರೆ. 1 ನೇ ಎದುರುದಾರರಿಂದ ಘಟನೆ ಬಗ್ಗೆ ಸಮಜಾಯಿಷಿ ಕೇಳಲಾಗಿ "ದೂರುದಾರರು ಒತ್ತಾಯ ಪೂರ್ವಕವಾಗಿ ಹಣ ಕೊಡಲು ಬಂದಿದ್ದಾಗ ಬೇಡ ಎಂದು ಹೇಳಿದರೂ ಪಾಸ್ ಹಾಕಿಕೊಡುವಂತೆ ಕೇಳಿಕೊಂಡಿರುತ್ತಾರೆ. ನಾನು ಸದರಿಯವರಿಗೆ ಯಾವ ಹಣ ಕೇಳಿರಲಿಲ್ಲ" ಎಂದು ಲಿಖಿತ ಸಮಜಾಯಿಷಿಯನ್ನು ನೀಡಿರುತ್ತಾರೆ. 2ನೇ ಎದುರುದಾರರಿಂದ ಆತನ

ಮೊಬೈಲ್ ಸೆಟ್‌ನ್ನು ವಶಪಡಿಸಿಕೊಂಡಿದ್ದು, 1ನೇ ಎದುರುದಾರರು 2ನೇ ಎದುರುದಾರರಿಗೆ ಪಾಸ್‌ಗಾಗಿ ರೂ. 5,000/- ನೀಡ ಬೇಕಾಗುತ್ತದೆ ಎಂದು ಸೂಚಿಸಿದ್ದು ಇರುತ್ತದೆ. ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ತನಿಖಾಧಿಕಾರಿಗಳು ನೆರಳು ಸಾಕ್ಷಿ ಶ್ರೀ ದೇವರಾಜ್ ತಂದೆ ರಮೇಶ್ ಕಾಂಬಳೆ 2ನೇ ಎದುರುದಾರರಿಂದ ಅಲ್ಲಿ ನಡೆದ ಘಟನೆ ಬಗ್ಗೆ ವಿಚಾರಿಸಿ, ಅವರಿಂದ ಅಲ್ಲಿಯ ನಡುವಳಿಕೆಗಳನ್ನು ತಿಳಿದು ಸವಿಸ್ತಾರ ಜಪ್ತಿ ಪಂಚನಾಮೆ ನಿರ್ವಹಿಸಿ, ದೂರುದಾರರ ಹಾಗೂ ಪಂಚರ ಸಮಕ್ಷಮ ಸದರಿ ಹಣವನ್ನು ತನಿಖಾಧಿಕಾರಿಗಳು ವಶಪಡಿಸಿಕೊಂಡಿರುತ್ತಾರೆ. ದೂರುದಾರರ ಬಾಬ್ತುಗೆ ಸಂಬಂಧಿಸಿದ ದಾಖಲೆಗಳನ್ನು 2 ನೇ ಎದುರುದಾರರ ಮನೆಯಿಂದ ವಶಪಡಿಸಿಕೊಂಡಿರುತ್ತಾರೆ. ಸದರಿ ಹಣದ ಬಗ್ಗೆ ತನಿಖಾಧಿಕಾರಿಯು 2ನೇ ಎದುರುದಾರರಿಗೆ ವಿಚಾರಿಸಿದಾಗ "ದೂರುದಾರರು ಒತ್ತಾಯ ಪೂರ್ವಕವಾಗಿ ಹಣ ಕೊಡಲು ಬಂದಿದ್ದಾಗ ಬೇಡ ಎಂದು ಹೇಳಿದರೂ ಪಾಸ್ ಹಾಕಿಕೊಡುವಂತೆ ಕೇಳಿಕೊಂಡಿರುತ್ತಾರೆ. ನಾನು ಸದರಿಯವರಿಗೆ ಯಾವ ಹಣ ಕೇಳಿರಲಿಲ್ಲ" ಎಂದು ಸಮಜಾಯಿಷಿ ನೀಡಿದ್ದು ಅದು ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಆಗಿರುವುದಿಲ್ಲ. ಸದರಿಯವರು ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟ ಬಗ್ಗೆ ದೂರುದಾರರ ಮತ್ತು ಎದುರುದಾರರ ಮಧ್ಯ ಸಂಭಾಷಣೆಯು ಮೊಬೈಲ್‌ನಲ್ಲಿ ಮೂಡಿಬಂದಿದ್ದು ಇರುತ್ತದೆ. ತನಿಖಾಧಿಕಾರಿಗಳು ಈ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳು 2ನೇ ಎದುರುದಾರರ ಮನೆಯಲ್ಲಿದ್ದು, ಕರೆದುಕೊಂಡು ಹೋದರೆ ಹಾಜರುಪಡಿಸುತ್ತೇನೆ ಎಂದು ತಿಳಿಸಿದ ಮೇರೆಗೆ ಸದರಿಯವರ ಮನೆಗೆ ಹೋಗಿ ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಸವಿಸ್ತಾರ ಮುಂದುವರೆದ ಪಂಚನಾಮೆಯನ್ನು ನಿರ್ವಹಿಸಿ ವಶಪಡಿಸಿಕೊಂಡಿರುತ್ತಾರೆ. ಈ ಬಗ್ಗೆ ಹಂತ ಹಂತವಾಗಿ ಫೋಟೋಗಳನ್ನು ತೆಗೆದಿರುತ್ತಾರೆ. ತನಿಖಾಧಿಕಾರಿಗಳು ಸದರಿ ಪಂಚನಾಮೆಯನ್ನು ದಿ: 26/10/2016 ರ ರಾತ್ರಿ 7-00 ಘಂಟೆಯಿಂದ ದಿ: 27/10/2016 ರಂದು ಬೆಳಗ್ಗೆ 4-00 ಘಂಟೆಯವರೆಗೆ ನಿರ್ವಹಿಸಿರುತ್ತಾರೆ.

5) ತನಿಖಾಧಿಕಾರಿಯವರು ಸವಿಸ್ತಾರ ಜಪ್ತಿ ಪಂಚನಾಮೆ ಪೂರೈಸಿದ ನಂತರ 1 ಮತ್ತು 2ನೇ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

6) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು. 1 ಮತ್ತು 2ನೇ ಎದುರುದಾರರ ದುರ್ನಡತೆಯನ್ನು ತೋರಿಸುತ್ತದೆ.

7) ಧ್ವನಿ ವಿಶ್ಲೇಷಣಾ ವರದಿ ಬರುವುದು ಬಾಕಿ ಇರುತ್ತದೆ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಿಂದ ದೃಢಪಟ್ಟಿರುತ್ತದೆ.

8) ಎದುರುದಾರರಿಗೆ ದಿನಾಂಕ 05/10/2021 ರಂದು ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿದ್ದು ಅದಕ್ಕೆ ಸದರಿಯವರು ತಮ್ಮ ಸಮಜಾಯಿಷಿಯನ್ನು ದಿನಾಂಕ 1ನೇ ಎದುರುದಾರರು ದಿ: 09/11/2021 ರಂದು ಹಾಗೂ 2 ನೇ ಎದುರುದಾರರು ದಿನಾಂಕ 15/11/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಗಳನ್ನು ಪರಿಶೀಲಿಸಲಾಗಿ 1 ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಪ್ರಕರಣದ ಸಂಪೂರ್ಣ ವಿಷಯವನ್ನು ಸುಳ್ಳೆಂದು ಅಲ್ಲಗೆಳೆದಿರುತ್ತಾರೆ. ಜೊತೆಗೆ "ದೂರುದಾರನಿಂದ ಯಾವುದೇ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವುದಿಲ್ಲ ಮತ್ತು ಲಂಚದ ಹಣ ಪಡೆದಿರುವುದಿಲ್ಲ. ಕಾರಣ ಯಾವುದೇ ದುರ್ನಡತೆ ಪ್ರಶ್ನೆಯೇ ಇರುವುದಿಲ್ಲ. ಈ ಎದುರುದಾರರು ಆರೋಪಿಸಲಾದ ಎಲ್ಲಾ ಆರೋಪಗಳನ್ನು ನಿರಾಕರಿಸುತ್ತಾರೆ. ತಮ್ಮ ಪರಿವೀಕ್ಷಣಾ ಟಿಪ್ಪಣಿಯಲ್ಲಿ ಕಾಣಿಸಿರುವಂತೆ ಈ ಎದುರುದಾರರು ಸರ್ಕಾರಿ ನೌಕರನಾಗಿ ಯಾವುದೇ ದುರ್ನಡತೆ ತೋರಿಸಿರುವುದಿಲ್ಲ. ಕರ್ತವ್ಯ ಲೋಪ ಎಸಗಿರುವುದಿಲ್ಲ. ಈ ಎದುರುದಾರರು ತಮ್ಮ ಸೇವಾ ಅವಧಿಯಲ್ಲಿ ಸಂಪೂರ್ಣ ನಿಷ್ಠೆಯಿಂದ ಯಾವುದೇ ಕರ್ತವ್ಯ ಲೋಪ ಎಸಗದೇ ಸಲ್ಲಿಸಿದ್ದು ಯಾವುದೇ ಅಪರಾಧ ಎಸಗ್ಗಿರುವುದಿಲ್ಲ" ಎಂದು ಸಮಜಾಯಿಷಿ ನೀಡಿರುತ್ತಾರೆ. 2ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಪಿರ್ಯಾದುದಾರರಿಗೆ ಹೊನ್ನೆ ನಾಟಾ ಸಾಗಿಸಲು ಸಾಗಾಣಿಕೆ ಪಾಸ್ ವಿತರಿಸಲು ನಾನು ಸಂಬಂಧಿಸಿದ ಅಧಿಕಾರಿಯಾಗಿರುವುದಿಲ್ಲ. ಕರ್ನಾಟಕ ಅರಣ್ಯ ಸಂಹಿತೆ 1976 ರ ರೂಲ್ – 124 (ಬಿ) ಪ್ರಕಾರ ಮೊದಲನೇ ಆರೋಪಿ ರಮೇಶ ಹಾರ್ನಳ್ಳಿ ಪ್ರಭಾರಿ ಉಪವಲಯ ಅರಣ್ಯಾಧಿಕಾರಿ ಇವರ ಕರ್ತವ್ಯವಾಗಿದೆ. ನಾನು ಅರಣ್ಯ ಸಂಚಾರಿದಳದ ಅಧಿಕಾರಿಯಾಗಿದ್ದು ರೂಲ್ – 122 ರ ಪ್ರಕಾರ ನನಗೆ ರಪ್ತಿಪಾಸು ವಿತರಿಸಲು ಅಧಿಕಾರವಿರುವುದಿಲ್ಲ." ಮುಂದುವರೆದು "ಪಿರ್ಯಾದುದಾರರಿಗೆ ಸಂಬಂಧಿಸಿದ ಯಾವುದೇ ದಾಖಲಾತಿಗಳು ನನ್ನ ಬಳಿ ಮತ್ತು ನನ್ನ ಮನೆಯಲ್ಲಿ

ದೊರೆತಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಹಣದ ವ್ಯವಹಾರ ನಡೆದಿರುವುದಿಲ್ಲ ಮತ್ತು ನನ್ನ ಹತ್ತಿರ ಯಾವುದೇ ಹಣವನ್ನು ಪಿರ್ಯಾದಿಯು ನೀಡಿರುವುದಿಲ್ಲ. ನಾನು ಹಣವನ್ನು ನೀಡಲು ಯಾರಿಗೂ ತಿಳಿಸಿರುವುದಿಲ್ಲ." ಎಂದು ಸಮಜಾಯಿಷಿ ನೀಡಿರುತ್ತಾರೆ. ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

9) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

10) ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು, ದಾಖಲಾತಿಗಳನ್ನು ಮತ್ತು ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈ ಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

11) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಟತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡುಬರುತ್ತದೆ.

12) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) 2021 ನಿಯಮ 3 (1) (i) ರಿಂದ (iii) ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು

ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸಬೇಕೆಂದೂ ಕೋರಿದೆ.

13) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ <u>ಮೂರು ತಿಂಗಳೊಳಗೆ</u> ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

24/2/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.